**ಕರ್ನಾಟಕ ಲೋಕಸೇವಾ ಆಯೋಗ**

ಸಂಖ್ಯೆ: ಆಡಳಿತ/ 2033/2013-14/ಪಿಎಸ್‌ಸಿ. ಲೋಕಸೇವಾ ಆಯೋಗದ ಕಛೇರಿ,
ಉದ್ಯೋಗ ಸೌಧ,
ಬೆಂಗಳೂರು, ದಿನಾಂಕ: 01-02-2014.
03

**ಅಧಿಕೃತ ಜ್ಞಾಪನ**

ವಿಷಯ: ನೇರ ನೇಮಕಾತಿಗೆ ಪ್ರಸ್ತಾವನೆಗಳನ್ನು ಸ್ವೀಕರಿಸಲು ಆಯೋಗದಲ್ಲಿ ಏಕಗವಾಕ್ಷಿ ಪದ್ಧತಿ(Single Window System)ಯನ್ನು ಜಾರಿಗೊಳಿಸುವ ಬಗ್ಗೆ.

***

ಆಯೋಗದಲ್ಲಿ ನೇರ ನೇಮಕಾತಿಗಾಗಿ ಸ್ವೀಕೃತವಾಗುವ ಪ್ರಸ್ತಾವನೆಗಳಲ್ಲಿ ನ್ಯೂನತೆಗಳು ಇರುವುದರಿಂದ ನೇಮಕಾತಿ ಪ್ರಕ್ರಿಯೆಗಳನ್ನು ಪ್ರಾರಂಭಿಸಲು ವಿಳಂಬವಾಗುತ್ತಿದ್ದು ಇದನ್ನು ತಡೆಗಟ್ಟಲು ಆಯೋಗವು ಏಕಗವಾಕ್ಷಿ ಪದ್ಧತಿ(Single Window System)ಯನ್ನು ಜಾರಿಗೊಳಿಸಲು ತೀರ್ಮಾನಿಸಿರುತ್ತದೆ.

ಈ ಪದ್ಧತಿಯನ್ವಯ ನೇಮಕಾತಿ ಪ್ರಾಧಿಕಾರಿಗಳು ಅವರ ಇಲಾಖೆಗಳಲ್ಲಿನ ಹುದ್ದೆಗಳ ನೇರ ನೇಮಕಾತಿಗೆ ಪ್ರಸ್ತಾವನೆಯನ್ನು ಆಯೋಗದ ನೋಡಲ್ ಅಧಿಕಾರಿಯವರ, ಮುಂದೆ ಪರಿಶೀಲನೆಗಾಗಿ ಅನುಬಂಧ(ಸಿ) ರಲ್ಲಿನ ಚೆಕ್‌ಲಿಸ್ಟ್‌ನಲ್ಲಿ ನಮೂದಿಸಿರುವ ಈ ಕೆಳಕಂಡ ದಾಖಲೆಗಳೊಂದಿಗೆ ಖುದ್ದಾಗಿ ಸಲ್ಲಿಸತಕ್ಕದ್ದು:-

1. ಪ್ರಸ್ತುತ ಚಾಲ್ತಿಯಲ್ಲಿರುವ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಧೃಡೀಕೃತ ಪ್ರತಿ.
2. ನೇಮಕಾತಿ ನಿಯಮಗಳಿಗೆ ತಿದ್ದುಪಡಿಗಳಾಗಿದ್ದಲ್ಲಿ ಅದರ ಧೃಡೀಕೃತ ಪ್ರತಿಗಳು.
3. ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯ ಸಹಮತಿಯ ಪತ್ರ.
4. ಎಲ್ಲಾ ವಿವರಗಳನ್ನೊಳಗೊಂಡ ನಮೂನೆ-6 (ಅನುಬಂಧ-ಬಿ) ರಲ್ಲಿ ನೇಮಕಾತಿ ಪ್ರಾಧಿಕಾರ/ಇಲಾಖಾ ಮುಖ್ಯಸ್ಥರ ಧೃಡೀಕೃತ ಪ್ರಸ್ತಾವನೆ.
5. ನಿಯಮಗಳಲ್ಲಿ ನಮೂದಿಸಿರುವ ವಿದ್ಯಾರ್ಹತೆಗೆ ತತ್ಸಮಾನ ವಿದ್ಯಾರ್ಹತೆ ನಿಗದಿ ಪಡಿಸಿದ್ದಲ್ಲಿ, ತತ್ಸಮಾನ ವಿದ್ಯಾರ್ಹತೆಯ ವಿವರಗಳು ಹಾಗೂ ಈ ಸಂಬಂಧ ಹೊರಡಿಸಲಾದ ಸರ್ಕಾರದ ಅಧಿಸೂಚನೆಯ ಪ್ರತಿಗಳು.
6. ಇತರೆ ಯಾವುದೇ ವಿಶೇಷ ಸೂಚನೆಗಳು/ಆದೇಶಗಳ ಪ್ರತಿ.

ಇನ್ನುಮುಂದೆ ಎಲ್ಲಾ ನೇಮಕಾತಿ ಪ್ರಾಧಿಕಾರಗಳು/ಇಲಾಖೆಗಳು ಅವರ ಇಲಾಖೆಯಲ್ಲಿನ ಅಧೀನ ಕಾರ್ಯದರ್ಶಿಯ ವೃಂದಕ್ಕಿಂತ ಕಡಿಮೆ ಇಲ್ಲದಂತಹ ಅಧಿಕಾರಿಯನ್ನು ನೋಡಲ್ ಅಧಿಕಾರಿಯೆಂದು ನೇಮಿಸತಕ್ಕದ್ದು. ಇವರು ಪ್ರಸ್ತಾವನೆಯನ್ನು ಸಲ್ಲಿಸಲು ಫ್ಯಾಕ್ಸ್ ಸಂಖ್ಯೆ 080 22266481 ರ ಮುಖಾಂತರ ಆಯೋಗದ ನೋಡಲ್ ಅಧಿಕಾರಿಯಿಂದ ಭೇಟಿಯ ದಿನಾಂಕ/ಸಮಯವನ್ನು ನಿಗದಿತ ನಮೂನೆಯಲ್ಲಿ (ಅನುಬಂಧ-ಎ) ಪಡೆಯತಕ್ಕದ್ದು. ನಿಗದಿ ಪಡಿಸಿದ ದಿನಾಂಕ/ವೇಳೆಯಂದು ಇವರು ಖುದ್ದಾಗಿ ಪ್ರಸ್ತಾವನೆ ಹಾಗೂ ಇತರೆ ದಾಖಲೆಗಳೊಂದಿಗೆ ಆಯೋಗದ ನೋಡಲ್ ಅಧಿಕಾರಿಯನ್ನು ಸಂಪರ್ಕಿಸತಕ್ಕದ್ದು. ಈ ಪದ್ಧತಿಯಲ್ಲಿ ಸ್ವೀಕೃತವಾದ ಪ್ರಸ್ತಾವನೆಗಳನ್ನು ಆಯೋಗದ ನೋಡಲ್ ಅಧಿಕಾರಿ ಹಾಗೂ ನೇಮಕಾತಿಗೆ ಸಂಬಂಧಪಟ್ಟ ಸಹಾಯಕ ಕಾರ್ಯದರ್ಶಿಯವರು ಪರಿಶೀಲಿಸಿ ಕ್ರಮಬದ್ಧವಾಗಿದ್ದಲ್ಲಿ ಇದನ್ನು ಸ್ವೀಕರಿಸತಕ್ಕದ್ದು. ಪ್ರಸ್ತಾವನೆಯಲ್ಲಿ ನ್ಯೂನತೆಗಳು ಕಂಡು ಬಂದಲ್ಲಿ ಸ್ಥಳದಲ್ಲಿಯೇ ಅದನ್ನು ತಿರಸ್ಕರಿಸಿ ಇಲಾಖೆಯ ನೋಡಲ್ ಅಧಿಕಾರಿಗೆ ಹಿಂದಿರುಗಿಸಲಾಗುವುದು.

ಎಲ್ಲಾ ನೇಮಕಾತಿ ಪ್ರಾಧಿಕಾರಿಗಳು/ಇಲಾಖೆಗಳು ಆಯೋಗದಲ್ಲಿ ಜಾರಿಗೊಳಿಸಿರುವ ಈ ಹೊಸ ಪದ್ಧತಿಯನ್ನು ಗಮನಿಸಿ ಅವರ ಅಧೀನದಲ್ಲಿರುವ ಇತರೆ ಇಲಾಖೆಗಳ ಗಮನಕ್ಕೆ ತರುವುದು.

ಕಾರ್ಯದರ್ಶಿ

# ಏಕಗವಾಕ್ಷಿ ಪದ್ಧತಿ
## ನೇರ ನೇಮಕಾತಿ ಮೂಲಕ ಹುದ್ದೆಗಳನ್ನು ಭರ್ತಿ ಮಾಡಲು ಪ್ರಸ್ತಾವನೆ ಸಲ್ಲಿಸುವ ಬಗ್ಗೆ ಮಾರ್ಗಸೂಚಿಗಳು

ಆಯೋಗದಲ್ಲಿ ನೇರ ನೇಮಕಾತಿಗಳಿಗಾಗಿ ಇಲಾಖೆಗಳಿಂದ ಪ್ರಸ್ತಾವನೆಗಳನ್ನು ಸ್ವೀಕರಿಸಲು ದಿನಾಂಕ 01.03.14ರಿಂದ ಏಕಗವಾಕ್ಷಿ ಪದ್ಧತಿಯನ್ನು ಜಾರಿಗೊಳಿಸಿದೆ.

ಸದರಿ ಪದ್ಧತಿಯ ಜಾರಿಯ ಹಿನ್ನಲೆಯಲ್ಲಿ ಎಲ್ಲಾ ಇಲಾಖೆಗಳು ಅವರ ಇಲಾಖೆಯಲ್ಲಿನ ಹುದ್ದೆಗಳ ನೇರ ನೇಮಕಾತಿಗಾಗಿ ಪ್ರಸ್ತಾವನೆಯನ್ನು ಖುದ್ದಾಗಿ ಆಯೋಗದ ನೋಡಲ್ ಅಧಿಕಾರಿಗೆ (ಉಪ ಕಾರ್ಯದರ್ಶಿ, ಆಡಳಿತ) ಸಲ್ಲಿಸತಕ್ಕದ್ದು. ಪ್ರಸ್ಥಾವನೆಯನ್ನು ಸ್ಥಳದಲ್ಲಿಯೇ ಪರೀಶಿಲಿಸಲು ಅನುಕೂಲವಾಗುವಂತೆ ಅವರ ಇಲಾಖೆಯಲ್ಲಿನ ಅಧೀನ ಕಾರ್ಯದರ್ಶಿಯ ವೃಂದಕ್ಕಿಂತ ಕಡಿಮೆ ಇಲ್ಲದಂತಹ ನೋಡಲ್ ಅಧಿಕಾರಿಯನ್ನು ಕಳುಹಿಸತಕ್ಕದ್ದು.

ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವ ಕೋರಿಕೆಯ ನಮೂನೆಯನ್ನು ಅನುಬಂಧ 'ಎ' ರಲ್ಲಿ ತೊರಿಸಲಾಗಿದ್ದು ಇದನ್ನು ಆಯೋಗದ ಫ್ಯಾಕ್ಸ್ ಸಂಖ್ಯೆ 080–22266481 ಗೆ ಕಳುಹಿಸಬೇಕು. ಕೋರಿಕೆ ಸ್ವೀಕರಿಸಿದ ಕೂಡಲೇ ಆಯೋಗದ ನೋಡಲ್ ಅಧಿಕಾರಿಯವರು ಇಬ್ಬರ ಅನುಕೂಲಕ್ಕೆ ತಕ್ಕಂತೆ ದಿನಾಂಕ ಹಾಗೂ ಸಮಯವನ್ನು ನೀಡತಕ್ಕದ್ದು.

ಆಯೋಗದ ಅಧಿಕೃತ ಜ್ಞಾಪನ ಸಂಖ್ಯೆ ಇ 2033/2013-14/PSC ದಿನಾಂಕ 01-03-2014ರೊಂದಿಗೆ ಅನುಬಂಧಿಸಿರುವ ನಮೂನೆ 6ನ್ನು (ಅನುಬಂಧ–ಬಿ) ಆಯೋಗದ ಅಂತರ್ಜಾಲದಿಂದ ಡೌನ್‌ಲೋಡ್ ಮಾಡಿಕೊಂಡು ಈ ನಮೂನೆಯಲ್ಲಿಯೇ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು. ನೇಮಕಾತಿಗಾಗಿ ನೀಡಿರುವ ಪ್ರಸ್ತಾವನೆಯು ಎಲ್ಲಾ ರೀತಿಯಲ್ಲಿ ಕ್ರಮಬದ್ಧವಾಗಿದೆ ಎಂದು ಧೃಡೀಕರಿಸತಕ್ಕದ್ದು. ಮೀಸಲಾತಿ, ವಿದ್ಯಾರ್ಹತೆ, ಸೇವಾನುಭವ, ವಯೋಮಿತಿ, ಇತ್ಯಾದಿ ವಿವರಗಳಿಗೆ ಚೆಕ್‌ಲಿಸ್ಟ್ (ಅನುಬಂಧ–ಸಿ) ಅನ್ನು ಅಗತ್ಯ ದಾಖಲೆಗಳ ಜೊತೆಯಲ್ಲಿ ಸಲ್ಲಿಸ ತಕ್ಕದ್ದು.

ಏಕಗವಾಕ್ಷಿ ಪದ್ಧತಿಯಡಿ ಖುದ್ದಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ಅನುಸರಿಸಬೇಕಾದ ಕ್ರಮಗಳು :–

- ಆಯೋಗದ ಅಂತರ್ಜಾಲದಿಂದ ನಮೂನೆ–6ಅನ್ನು (ಅನುಬಂಧ–ಬಿ) ಡೌನ್‌ಲೋಡ್ ಮಾಡಿಕೊಳ್ಳುವುದು.
- ನೇಮಕಾತಿ ಪ್ರಸ್ತಾವನೆಯ ಬಗ್ಗೆ ಪೂರ್ಣ ಮಾಹಿತಿಯುಳ್ಳ ಸಹಾಯಕ ಕಾರ್ಯದರ್ಶಿಯ ವೃಂದಕ್ಕಿಂತ ಕಡಿಮೆ ಇಲ್ಲದಂತಹ ಅಧಿಕಾರಿಯನ್ನು ನೋಡಲ್ ಅಧಿಕಾರಿಯೆಂದು ನೇಮಿಸುವುದು.
- ನೋಡಲ್ ಅಧಿಕಾರಿಯು ನಮೂನೆ–6ರಲ್ಲಿ ಭರ್ತಿ ಮಾಡಲಾದ ಎಲ್ಲಾ ವಿವರಗಳು, ಅಂದರೆ, ವೇತನ ಶ್ರೇಣಿ, ವಯೋಮಿತಿ, ಹುದ್ದೆಗಳ ವರ್ಗೀಕರಣ, ವರ್ಗೀಕರಣದ ಪ್ರಾರಂಭಿಕ ರೋಸ್ಟರ್ ಬಿಂದು (ಸರ್ಕಾರದ ಇತ್ತೀಚಿನ ಎಲ್ಲಾ ಆದೇಶಗಳನ್ನೊಳಗೊಂಡಂತೆ) ಕರ್ತವ್ಯ ನಿರ್ವಹಣೆ, ಕಾರ್ಯ

ಸ್ವರೂಪ, ವಿದ್ಯಾರ್ಹತೆ, ತತ್ಸಮಾನ ವಿದ್ಯಾರ್ಹತೆ (ಇದ್ದಲ್ಲಿ), ನೇಮಕಾತಿ ವಿಧಾನ, ಇತ್ಯಾದಿ ಅಂಶಗಳನ್ನು ಪರಿಶೀಲಿಸಿ ನೇಮಕಾತಿ ಪ್ರಾಧಿಕಾರದಿಂದ ದೃಢೀಕರಿಸಿಕೊಳ್ಳಬೇಕು.

- ನೇಮಕಾತಿ ಪ್ರಾಧಿಕಾರ ದೃಢೀಕರಿಸಿರುವ ಎಲ್ಲಾ ತಿದ್ದುಪಡಿಗಳು/ಸೇರ್ಪಡೆಗಳೊಂದಿಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರತಿಯನ್ನು ಪ್ರಸ್ತಾವನೆಯೊಂದಿಗೆ ಲಗತ್ತಿಸಬೇಕು.
- ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯ ಸಹಮತಿಯ ಪ್ರತಿಯನ್ನು ಪ್ರಸ್ತಾವನೆಯೊಂದಿಗೆ ಲಗತ್ತಿಸಬೇಕು.
- ಹುದ್ದೆಗಳಿಗೆ ನಿಯಮಗಳಲ್ಲಿ ತತ್ಸಮಾನ ವಿದ್ಯಾರ್ಹತೆ ನಿಗದಿಪಡಿಸಿದ್ದಲ್ಲಿ, ತತ್ಸಮಾನ ವಿದ್ಯಾರ್ಹತೆಗಳು ಯಾವುದೆಂದು ಮಾಹಿತಿಯೊಂದಿಗೆ ಈ ಸಂಬಂಧ ಹೊರಡಿಸಲಾದ ಸರ್ಕಾರದ ಅಧಿಸೂಚನೆಯ ಪ್ರತಿಗಳನ್ನು ಪ್ರಸ್ತಾವನೆಯೊಂದಿಗೆ ಲಗತ್ತಿಸಬೇಕು.
- ಸ್ಪರ್ಧಾತ್ಮಕ ಪರೀಕ್ಷೆಯ ನಿರ್ದಿಷ್ಠ ಪತ್ರಿಕೆಯ ಪಠ್ಯಕ್ರಮ ಆಂಗ್ಲ ಮತ್ತು ಕನ್ನಡ ಭಾಷೆಯಲ್ಲಿ ನೀಡತಕ್ಕ(Hard Copy & Soft Copy)- [ನಿಯಮಗಳಲ್ಲಿ ಪಠ್ಯ ಕ್ರಮ ನಿಗದಿ ಪಡಿಸದಂತಹ ನೇಮಕಾತಿಗಳಿಗೆ]
- ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಇನ್ನಾವುದಾದರೂ ವಿಶೇಷ ನಿಯಮಗಳು/ಆದೇಶಗಳು/ಸೂಚನೆಗಳ ಪ್ರತಿಗಳನ್ನು ಪ್ರಸ್ತಾವನೆಯೊಂದಿಗೆ ಲಗತ್ತಿಸಬೇಕು.

ಮೇಲಿನಂತೆ ಕ್ರಮ ಕೈಗೊಂಡ ನಂತರ ಮೊದಲಿಗೆ ಆಯೋಗದ ನೋಡಲ್ ಅಧಿಕಾರಿಯಿಂದ ಫ್ಯಾಕ್ಸ್ ಸಂಖ್ಯೆ 080 22266481 ಮುಖಾಂತರ ಪ್ರಸ್ತಾವನೆ ಸಲ್ಲಿಸಲು ಪೂರ್ವಾನುಮತಿಯನ್ನು ಪಡೆದು ಈ ಎಲ್ಲಾ ದಾಖಲೆಗಳು ಹಾಗೂ ಅನುಬಂಧ–ಸಿ ನಲ್ಲಿರುವ ಚೆಕ್‌ಲಿಸ್ಟ್‌ನೊಂದಿಗೆ ಪ್ರಸ್ತಾವನೆಯನ್ನು ನಮೂನೆ–6ರಲ್ಲಿ ಪಡೆದು ಖುದ್ದಾಗಿ ನಿಗದಿ ಪಡಿಸಿದ ದಿನಾಂಕದಂದು ಸಲ್ಲಿಸ ತಕ್ಕದ್ದು.

ಪ್ರಸ್ತಾವನೆಯಲ್ಲಿನ ಮಾಹಿತಿಯು ಕ್ರಮ ಬದ್ಧವಾಗಿಲ್ಲದಿದ್ದಲ್ಲಿ ಸ್ಥಳದಲ್ಲಿಯೇ ಪ್ರಸ್ತಾವನೆಯನ್ನು ತಿರಸ್ಕರಿಸಿ, ತಿರಸ್ಕರಿಸುವ ಕಾರಣ ಹಾಗೂ ಸ್ವೀಕೃತಿಯೊಂದಿಗೆ ಹಿಂದಿರುಗಿಸಲಾಗುವುದು. ಪ್ರಸ್ತಾವನೆಯಲ್ಲಿನ ಮಾಹಿತಿಯು ಕ್ರಮಬದ್ಧವಾಗಿದ್ದಲ್ಲಿ ಆಯೋಗವು ಯಾವುದೇ ಕಾಲ ವಿಳಂಬಕ್ಕೆ ಆಸ್ಪದ ನೀಡದೇ ಅಧಿಸೂಚನೆ ಹೊರಡಿಸುವುದು.

## ಹೆಚ್ಚುವರಿ ಆಯ್ಕೆ ಪಟ್ಟಿಗೆ ಪ್ರಸ್ತಾವನೆ

ನೇಮಕಾತಿ ನಿಯಮಗಳಲ್ಲಿ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಲು ಅವಕಾಶವಿದ್ದಲ್ಲಿ ಪ್ರಸ್ತಾವನೆಯನ್ನು ಮುಖ್ಯ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಮಾಡಿರುವ ಬಗ್ಗೆ ನಮೂನೆ–7 ರಲ್ಲಿ (ಅನುಬಂಧ–ಡಿ) ಮಾಹಿತಿಯೊಂದಿಗೆ ಕನಿಷ್ಠ ಮುಖ್ಯಪಟ್ಟಿ ಪ್ರಕಟಿಸಿದ 6 ತಿಂಗಳ ಒಳಗಾಗಿ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

**ಯಾವುದೇ ಕಾರಣಕ್ಕೂ ಪ್ರಸ್ತಾವನೆಗಳನ್ನು ಅಂಚೆ ಮೂಲಕ ಕಳುಹಿಸುವುದಾಗಲೀ ಅಥವಾ ಆಯೋಗದ ತೀರುವಳಿ ಶಾಖೆಯಲ್ಲಿ ಸಲ್ಲಿಸಲು ನಿರ್ಬಂಧಿಸಿದ್ದು, ಖುದ್ದಾಗಿ ಆಯೋಗದ ನೋಡಲ್ ಅಧಿಕಾರಿಗೆ ಸಲ್ಲಿಸತಕ್ಕದ್ದು.**

(ಮನೋಜ್ ಕುಮಾರ್ ಮೀನಾ)
ಕಾರ್ಯದರ್ಶಿ
ಕರ್ನಾಟಕ ಲೋಕ ಸೇವಾ ಆಯೋಗ

ಅನುಬಂಧ–ಎ

**ಏಕಗವಾಕ್ಷಿ ಪದ್ಧತಿಯಡಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ ನೇರನೇಮಕಾತಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸುವ ಕೋರಿಕೆ**
**(ಉಪಕಾರ್ಯದರ್ಶಿ, ಆಡಳಿತ, ಕರ್ನಾಟಕ ಲೋಕಸೇವಾ ಆಯೋಗ ಇವರಿಗೆ ಫ್ಯಾಕ್ಸ್ ಸಂಖ್ಯೆ 080–22266481 ಗೆ ಫ್ಯಾಕ್ಸ್ ಮಾಡತಕ್ಕದ್ದು)**

1. ಇಲಾಖೆಯ ಹೆಸರು------------------------------------------
2. ಹುದ್ದೆಯ ಪದನಾಮ-----------------------------------------
3. ವೇತನ ಶ್ರೇಣಿ ಹಾಗೂ ವೃಂದ------------------------------------
4. ನಿಗದಿಪಡಿಸಿದ ವಿದ್ಯಾರ್ಹತೆ-------------------------------------
5. ಹುದ್ದೆಯ ಕಾರ್ಯಸ್ವರೂಪ--------------------------------------
6. ಚಾಲ್ತಿಯಲ್ಲಿರುವ ನೇಮಕಾತಿ ನಿಯಮಗಳ ಆದೇಶದ ಸಂಖ್ಯೆ ಮತ್ತು ದಿನಾಂಕ------------- -------------------------------------------------
7. ಹಿಂದೆ ಇದೇ ಹುದ್ದೆಗೆ ನೇಮಕಾತಿ ಮಾಡಿದ್ದಲ್ಲಿ ಆಯೋಗದ ಪತ್ರದ ವಿವರ-------------- ----------
8. ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲು ಅನುಕೂಲಕರವಾದ ದಿನಾಂಕ ಮತ್ತು ವೇಳೆ---------- ---------------------------------------------------

ಅಧಿಕಾರಿಯ ಹೆಸರು ಮತ್ತು ಪದನಾಮ
(ಪ್ರಸ್ತಾವನೆ ಸಲ್ಲಿಸುವ ಪ್ರಾಧಿಕಾರ)
ದಿನಾಂಕ:-----------------
ದೂರವಾಣಿ ಸಂಖ್ಯೆ: ----------

ಅನುಬಂಧ–ಬಿ

# ನಮೂನೆ–6

**ನೇರ ನೇಮಕಾತಿಯಿಂದ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಬಗ್ಗೆ ಕೋರಿಕೆಯ ನಮೂನೆ**

1. (ಅ) ಹುದ್ದೆಯ ಪದನಾಮ :

(i) ಇಲಾಖೆಯ ಹೆಸರು ಮತ್ತು ಕಛೇರಿ :
(ii) ಹುದ್ದೆಯು ಖಾಲಿಯಾಗಬಹುದೆಂದು ನಿರೀಕ್ಷಿಸಲಾದ ದಿನಾಂಕ :
(iii) ಸೇವೆಯ ವರ್ಗ :
(iv) ಕರ್ತವ್ಯ ನಿರ್ವಹಣೆಯ ಬಗ್ಗೆ :
(v) ಕೆಲಸದ ಸ್ವರೂಪ :
(vi) ಪ್ರಾದೇಶಿಕ ಭಾಷೆಯ ಜ್ಞಾನದ ಅಗತ್ಯವಿದೆಯೇ? :

(ಆ) ಆಯೋಗದಿಂದ ಇದೇ ಹುದ್ದೆಗಳಿಗೆ ಹಿಂದೆ ನೇಮಕಾತಿ ಪ್ರಕ್ರಿಯೆ ಕೈಗೊಂಡಿದ್ದಲ್ಲಿ ಆಯೋಗದ ಪತ್ರಸಂಖ್ಯೆ ಹಾಗೂ ದಿನಾಂಕ

(ಇ) ಭರ್ತಿ ಮಾಡಬೇಕಾದ ಹುದ್ದೆಗಳ ಸಂಖ್ಯೆ :

(ಈ) ಹುದ್ದೆಗಳ ವರ್ಗೀಕರಣದ ರೋಸ್ಟರಿನ ಪ್ರಾರಂಭಿಕ ಬಿಂದು :

(ಉ) ಮೀಸಲಿಡಲಾದ ಹುದ್ದೆಗಳ ಸಂಖ್ಯೆ :

i) ಮಹಿಳಾ ಅಭ್ಯರ್ಥಿಗಳಿಗೆ :

ii) ಈ ಕೆಳಗಿನ ಗುಂಪುಗಳಿಗೆ :

ಮೀಸಲಾಗಿಡಲಾದ ಹುದ್ದೆಗಳ ಸಂಖ್ಯೆ

| ಮೀಸಲಾತಿ | ಇತರೆ | ಮಹಿಳೆ | ಗ್ರಾಮೀಣ | ಮಾಸ್ಯೆ | ಕಮಾಅ | ಅಂ.ವಿ | | ಯೋ.ನಿ.ಅ | ಒಟ್ಟು |
|---|---|---|---|---|---|---|---|---|---|
| | | | | | | ಅಂಗವಿಕಲತೆ | ಸಂಖ್ಯೆ | | |
| ಪ.ಜಾ. | | | | | | ಅಂ. | | | |
| | | | | | | ದೃಮಾ | | | |
| | | | | | | ಶ್ರ.ದೋ | | | |
| | | | | | | ಚ.ವೈ. | | | |
| | | | | | | ಕು.ರೋ.ಗು. | | | |
| | | | | | | ಮಾ..ಅ | | | |
| | | | | | | ಬು.ಮಾ. | | | |
| ಪ.ಪಂ. | | | | | | ಅಂ. | | | |
| | | | | | | ದೃಮಾ | | | |
| | | | | | | ಶ್ರ.ದೋ | | | |
| | | | | | | ಚ.ವೈ. | | | |
| | | | | | | ಕು.ರೋ.ಗು. | | | |
| | | | | | | ಮಾ..ಅ | | | |
| | | | | | | ಬು.ಮಾ. | | | |
| ಪ್ರ 1 | | | | | | ಅಂ. | | | |
| | | | | | | ದೃಮಾ | | | |
| | | | | | | ಶ್ರ.ದೋ | | | |
| | | | | | | ಚ.ವೈ. | | | |
| | | | | | | ಕು.ರೋ.ಗು. | | | |
| | | | | | | ಮಾ..ಅ | | | |
| | | | | | | ಬು.ಮಾ. | | | |

| | | | | | | | | | |
|---|---|---|---|---|---|---|---|---|---|
| **ಪ್ರ.2(ಎ)** | | | | | | ಅಂ. | | | |
| | | | | | | ದೃಮಾ | | | |
| | | | | | | ಶ್ರ.ದೋ | | | |
| | | | | | | ಚ.ವೈ. | | | |
| | | | | | | ಕು.ರೋ.ಗು. | | | |
| | | | | | | ಮಾ..ಅ | | | |
| | | | | | | ಬು.ಮಾ. | | | |
| **ಪ್ರ.2(ಬಿ)** | | | | | | ಅಂ. | | | |
| | | | | | | ದೃಮಾ | | | |
| | | | | | | ಶ್ರ.ದೋ | | | |
| | | | | | | ಚ.ವೈ. | | | |
| | | | | | | ಕು.ರೋ.ಗು. | | | |
| | | | | | | ಮಾ..ಅ | | | |
| | | | | | | ಬು.ಮಾ. | | | |
| **ಪ್ರ.3(ಎ)** | | | | | | ಅಂ. | | | |
| | | | | | | ದೃಮಾ | | | |
| | | | | | | ಶ್ರ.ದೋ | | | |
| | | | | | | ಚ.ವೈ. | | | |
| | | | | | | ಕು.ರೋ.ಗು. | | | |
| | | | | | | ಮಾ..ಅ | | | |
| | | | | | | ಬು.ಮಾ. | | | |
| **ಪ್ರ.3(ಬಿ)** | | | | | | ಅಂ. | | | |
| | | | | | | ದೃಮಾ | | | |
| | | | | | | ಶ್ರ.ದೋ | | | |
| | | | | | | ಚ.ವೈ. | | | |
| | | | | | | ಕು.ರೋ.ಗು. | | | |
| | | | | | | ಮಾ..ಅ | | | |
| | | | | | | ಬು.ಮಾ. | | | |
| **ಸಾ.ಅ.** | | | | | | ಅಂ. | | | |
| | | | | | | ದೃಮಾ | | | |
| | | | | | | ಶ್ರ.ದೋ | | | |
| | | | | | | ಚ.ವೈ. | | | |
| | | | | | | ಕು.ರೋ.ಗು. | | | |
| | | | | | | ಮಾ..ಅ | | | |
| | | | | | | ಬು.ಮಾ. | | | |
| **ಒಟ್ಟು** | | | | | | ಅಂ. | | | |
| | | | | | | ದೃಮಾ | | | |
| | | | | | | ಶ್ರ.ದೋ | | | |
| | | | | | | ಚ.ವೈ. | | | |
| | | | | | | ಕು.ರೋ.ಗು. | | | |
| | | | | | | ಮಾ..ಅ | | | |
| | | | | | | ಬು.ಮಾ. | | | |

**ಮಾಸೈ : ಮಾಜಿ ಸೈನಿಕ**

**ಅಂ.ವಿ : ಅಂಗವಿಕಲ** (ಅಂಗವಿಕಲರಿಗೆ ಮೀಸಲಾದ ಹುದ್ದೆಗಳಿಗೆ ಯಾವ ಅಂಗವಿಕಲತೆ ಉಳ್ಳವರನ್ನು ಪರಿಗಣಿಸಬೇಕೆಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು ಅಂದರೆ –ಅಂ.(ಅಂಧ)/ ದೃಮಾ.(ದೃಷ್ಟಿ ಮಾಂದ್ಯ)/ ಶ್ರ.ದೋ.(ಶ್ರವಣ ದೋಷ)/ ಚ.ವೈ.(ಚಲನವಲನ ವೈಕಲ್ಯ)/ ಕು.ರೋ.ಗು.(ಕುಷ್ಠರೋಗದಿಂದ ಗುಣಮುಖರಾದವರು)/ ಮಾ.ಅ. (ಮಾನಸಿಕ ಅಸ್ವಸ್ಥ)/ ಬು.ಮಾ. (ಬುದ್ಧಿಮಾಂಧ್ಯ)

**ಕಮಾಅ:** ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ

**ಯೋನಿಅ:** ಯೋಜನೆ ನಿರಾಶ್ರಿತ ಅಭ್ಯರ್ಥಿಗಳು

| | |
|---|---|
| 2. ಈ ಹುದ್ದೆಯು ಖಾಯಂ ಅಥವಾ ತಾತ್ಕಾಲಿಕವೇ? ತಾತ್ಕಾಲಿಕವಾದರೆ ಅವಧಿಯು ಯಾವಾಗ ಕೊನೆಗೊಳ್ಳುವುದು? | |
| 3. ಪಿಂಚಣಿ ಸಹಿತವ್ರೋ ಅಥವಾ ಪಿಂಚಣಿ ರಹಿತವ್ರೋ? | |
| 4. ಖಾಯಂ ಪೂರ್ವಾವಧಿ ಯಾವುದಾದರೂ ಇದ್ದಲ್ಲಿ | |
| 5. ಅಭ್ಯರ್ಥಿಗಳು ಕಾರ್ಯ ನಿರ್ವಹಿಸಬೇಕಾದ/ ಬಹುದಾದ ಸ್ಥಳ ಅಥವಾ ಸ್ಥಳಗಳು | |
| 6. ಯಾವ ದಿನಾಂಕದಂದು ನೇಮಕಾತಿಯು ಕೊನೆಗೊಳ್ಳಬೇಕು ಮತ್ತು ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗಬೇಕು? | |
| 7. (ಅ) ವೇತನ ಶ್ರೇಣಿ<br><br>(ಆ) ಇತರೆ ಭತ್ಯೆಗಳು, ಯಾವುದಾದರೂ ಇದ್ದಲ್ಲಿ | |
| 8. ಏನಾದರೂ ವಿಶೇಷ ರಿಯಾಯಿತಿಗಳು ಅಂದರೆ, ಉಚಿತ ವಸತಿ, ಬೆಳಕು, ನೀರು ಇತ್ಯಾದಿ ಇದೆಯೇ? | |
| 9. (ಅ) ಉನ್ನತ ಹುದ್ದೆಗೆ ಮುಂಬಡ್ತಿಯ ಅವಕಾಶ ಅಥವಾ ಹೆಚ್ಚಿನ ವೇತನ ಶ್ರೇಣಿ ಪಡೆಯುವ ಅವಕಾಶವಿದ್ದಲ್ಲಿ ಅದನ್ನು ನಮೂದಿಸುವುದು | |
| (ಆ) ಏನಾದರೂ ವಿಶೇಷ ಸೇವಾ ನಿಯಮಾವಳಿಗಳು (ಸಾಮಾನ್ಯವಾಗಿ ಕ.ಸ.ಸೇ.ನಿ) ಅನ್ವಯಿಸುವುದೇ? ಕ.ಸ.ಸೇ ನಿಯಮಾವಳಿಗಳಿಗೆ ಹೊರತಾದ ಯಾವುದಾದರೂ ನಿಯಮ ಅನ್ವಯಿಸುವುದಿದ್ದಲ್ಲಿ ಅದನ್ನು ನಮೂದಿಸುವುದು | |
| 10. ನಿಯಮಗಳಲ್ಲಿ ನಿಗದಿಪಡಿಸಲಾಗಿರುವ ಕನಿಷ್ಠ ವಿದ್ಯಾರ್ಹತೆ (ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ)(ಪ್ರತಿ ಲಗತ್ತಿಸಿದೆಯೇ)<br>(ಅ) ಸಾಮಾನ್ಯ/ಶೈಕ್ಷಣಿಕ<br>(ಆ) ತಾಂತ್ರಿಕ<br>(ಇ) ಔದ್ಯೋಗಿಕ<br>(ಈ) ಪ್ರಾಯೋಗಿಕ ತರಬೇತಿ<br>(ಉ) ಅನುಭವ<br>(ಊ) ಬೇರೇನಾದರೂ ವಿದ್ಯಾರ್ಹತೆ ಇದ್ದಲ್ಲಿ<br>ಮೇಲಿನ ಅಗತ್ಯತೆಗಳಲ್ಲಿ ಯಾವುದನ್ನು ಸಡಿಲಿಸಬಹುದು ಮತ್ತು ಯಾವ ಸಂದರ್ಭಗಳಲ್ಲಿ ಸಡಿಲಿಸಬಹುದು?<br>(ಋ) ತತ್ಸಮಾನ ವಿದ್ಯಾರ್ಹತೆಗಳನ್ನು ಪರಿಗಣಿಸ ಬಹುದೇ? ಹಾಗಿದ್ದಲ್ಲಿ ತತ್ಸಮಾನ ವಿದ್ಯಾರ್ಹತೆ ಗಳನ್ನು ಸ್ಪಷ್ಟವಾಗಿ ನಮೂದಿಸುವುದು (ತತ್ಸಮಾನ | |

| | |
|---|---|
| ವಿದ್ಯಾರ್ಹತೆ ಬಗ್ಗೆ ಸರ್ಕಾರವು ಅಧಿಸೂಚಿಸಿರುವ ಅಧಿಸೂಚನೆಯ ಪ್ರತಿಗಳು ಲಗತ್ತಿಸಲಾಗಿದೆಯೇ?) | |
| 11. ನಿಯಮಗಳಲ್ಲಿ ನಿಗದಿಪಡಿಸಲಾಗಿರುವ ವಯೋಮಿತಿ<br>ಅ) ಕನಿಷ್ಠ<br>ಆ) ಗರಿಷ್ಠ<br>ಸರ್ಕಾರಿ ಸೇವೆಯಲ್ಲಿರುವ ವ್ಯಕ್ತಿಗಳ, ಮಹಿಳಾ ಅಭ್ಯರ್ಥಿಗಳ ಹಾಗೂ ಹಿಂದುಳಿದ ವರ್ಗ ಪ.ಜಾ. ಮತ್ತು ಪ.ಪಂ.ಗಳ ಅಭ್ಯರ್ಥಿಗಳ ವಯೋಮಿತಿಯನ್ನು ಪ್ರತ್ಯೇಕವಾಗಿ ನಮೂದಿಸುವುದು | |
| 12. ಅ) ಸರ್ಕಾರಿ ನೌಕರರು ಅರ್ಹರೇ?<br>ಆ) ಹಾಗಿದ್ದಲ್ಲಿ ಅವರಿಗೆ ಯಾವುದಾದರೂ ಷರತ್ತುಗಳಿಂದ ಸಡಿಲಿಕೆಗಳಿವೆಯೇ? ಸಡಿಲಿಕೆಗಳಿರುವ ಷರತ್ತುಗಳನ್ನು ನಮೂದಿಸುವುದು | |
| 13. ಆಯ್ಕೆಯನ್ನು ಸಂದರ್ಶನದ ಮೂಲಕ ಮಾಡಲಾಗುವುದೇ? ಹಾಗಿದ್ದಲ್ಲಿ ಸಂದರ್ಶನದ ವೇಳೆಯಲ್ಲಿ ಇಲಾಖೆಯ ಪ್ರತಿನಿಧಿಯಾಗಿ ಹಾಜರಿರುವವರ ಹೆಸರು ಮತ್ತು ವಿಳಾಸ | |
| 14. ಮೇಲಿನ ಪ್ರಶ್ನೆಗಳಲ್ಲಿ ಬರದಿರುವ ಬೇರೇನಾದರೂ ಷರತ್ತುಗಳು ಮತ್ತು ವಿದ್ಯಾರ್ಹತೆಗಳು | |
| 15. ಅ) ಹುದ್ದೆಯನ್ನು ಭರ್ತಿ ಮಾಡುವುದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಯಾವುದಾದರೂ ಮೊಕದ್ದಮೆ ಬಾಕಿ ಇದೇಯೇ?<br>ಆ) ಹುದ್ದೆಯನ್ನು ಭರ್ತಿ ಮಾಡುವುದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಯಾವುದಾದರೂ ಆದೇಶವನ್ನು ಅನುಸರಿಸುವುದು ಇಲಾಖೆಯಲ್ಲಿ ಬಾಕಿ ಉಳಿದಿದೇಯೇ?<br>ಇ) ಭರ್ತಿ ಮಾಡಲು ಉದ್ದೇಶಿಸಿದ ಹುದ್ದೆಗಳ ಬಗ್ಗೆ ರಾಜ್ಯ ಕಾಯ್ದೆ/ನಿಯಮಗಳನ್ನು ಮೀರುವ ಯಾವುದಾದರೂ ಕೇಂದ್ರ ಕಾಯ್ದೆ/ನಿಯಮ ಪ್ರಸ್ತುತವಿದೆಯೇ? | |
| 16. ಇತರೆ ಷರಾ, ಯಾವುದಾದರೂ ಇದ್ದಲ್ಲಿ | |

<u>ಧೃಡೀಕರಣ</u> :–

1. ಮೇಲೆ ನೀಡಿರುವ ಎಲ್ಲಾ ಮಾಹಿತಿಗಳು ಕ್ರಮಬದ್ಧವಾಗಿರುತ್ತವೆ.
2. ವರ್ಗೀಕರಣವನ್ನು ಚಾಲ್ತಿಯಲ್ಲಿರುವ ನಿಯಮಗಳಂತೆ ಮಾಡಲಾಗಿರುತ್ತದೆ.
3. ಅಂಗವಿಕಲರಿಗೆ ಮೀಸಲಾದ ಹುದ್ದೆಗಳಿಗೆ ಚಾಲ್ತಿಯಲ್ಲಿರುವ ನಿಯಮಗಳಂತೆ ನಿಗದಿಪಡಿಸಿರುವ ಅಂಗವಿಕಲತೆಗಳಿಗೆ ಮೀಸಲಿಡಲಾಗಿದೆ.
4. ಮೀಸಲಿಡಲಾದ ಅಂಗವಿಕಲತೆ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ನಿಯಮದಲ್ಲಿ ಗುರುತಿಸಲಾದ ಇತರೆ ಅಂಗವಿಕಲತೆಗಳಾದ __________________ಅಭ್ಯರ್ಥಿಗಳಿಂದ ಭರ್ತಿ ಮಾಡಬಹುದಾಗಿದೆ.
5. ತತ್ಸಮಾನ ವಿದ್ಯಾರ್ಹತೆಗೆ ಸರ್ಕಾರದ ಅಧಿಸೂಚನೆಯ ಪ್ರತಿಯನ್ನು ಲಗತ್ತಿಸಲಾಗಿದೆ.
6. ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯಿಂದ ಸಹಮತಿಯನ್ನು ಪಡೆಯಲಾಗಿದೆ.
7. ಸದರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೂ ಎಲ್ಲಾ ಹಂತದಲ್ಲಿಯೂ ನಮ್ಮ ಇಲಾಖೆಯ ಅಧಿಕಾರಿ/ಸಿಬ್ಬಂಧಿಯ ಸಹಕಾರ ನೀಡಲಾಗುವುದೆಂದು ಧೃಢೀಕರಿಸಿದೆ.

(ಯಾವುದು ಅಗತ್ಯವಿಲ್ಲವೋ ಅದನ್ನು ಬಿಟ್ಟು ಬಿಡುವುದು)

ನೇಮಕಾತಿ ಪ್ರಾಧಿಕಾರದ ಸಹಿ, ಹೆಸರು,
ಪದನಾಮ ಹಾಗೂ ಮೊಹರು.

ಈ ಪ್ರಸ್ತಾವನೆಯನ್ನು __________________ರವರ (ಪ್ರಸ್ತಾವನೆ ಸಲ್ಲಿಸುತ್ತಿರುವ ಇಲಾಖೆಯ ಮುಖ್ಯಸ್ಥರ ಹೆಸರು ಮತ್ತು ಪದನಾಮ) ಅನುಮೋದನೆಯನ್ನು ಪಡೆದು ಸಲ್ಲಿಸಿದೆ.

ನೋಡಲ್ ಅಧಿಕಾರಿಯ ಸಹಿ, ಹೆಸರು ಮತ್ತು ಪದನಾಮ
ದೂರವಾಣಿ ಸಂಖ್ಯೆ: _______________

ಸ್ಥಳ:

ದಿನಾಂಕ:

ಅನುಬಂಧ–ಸಿ

# ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–01

## ಚೆಕ್ ಲಿಸ್ಟ್

| ಕ್ರಮ ಸಂಖ್ಯೆ | ನೀಡಬೇಕಾಗಿರುವ ಮಾಹಿತಿ | ನಮೂನೆ 6ರಲ್ಲಿನ ಕ್ರಮ ಸಂಖ್ಯೆ. | ಹೌದು/ ಇಲ್ಲ |
|---|---|---|---|
| 1 | 2 | 3 | 4 |
| 1 | ಪ್ರಸ್ತಾವನೆಯನ್ನು ನಿಗದಿಪಡಿಸಿದ ನಮೂನೆ 6ರಲ್ಲಿ ನೀಡಲಾಗಿದೆಯೇ? | | |
| 2 | ಈಗ ಪ್ರಸ್ತಾಪಿಸಿರುವ ಹುದ್ದೆಗಳಿಗೆ ಹಿಂದೆ ಆಯೋಗದಲ್ಲಿ ನೇಮಕಾತಿ ಪ್ರಕ್ರಿಯೆ ಕೈಗೊಂಡಿದ್ದಲ್ಲಿ ಈ ಸಂಬಂಧ ಆಯೋಗದ ಪತ್ರ ಸಂಖ್ಯೆ ಹಾಗೂ ದಿನಾಂಕವನ್ನು ನೀಡಲಾಗಿದೆಯೇ? | | |
| 3 | ನಮೂನೆ–6ರಲ್ಲಿ ಕೋರಿರುವ ಎಲ್ಲಾ ವಿಷಯಗಳಿಗೆ ಮಾಹಿತಿ ನೀಡಲಾಗಿದೆಯೇ? | | |
| 4 | ನಮೂನೆ 6ರಲ್ಲಿನ ಪ್ರಸ್ತಾವನೆಯನ್ನು ನೇಮಕಾತಿ ಪ್ರಾಧಿಕಾರ ಧೃಡೀಕರಿಸಿರುತ್ತಾರೆಯೇ? | | |
| 5 | ಪ್ರಸ್ತಾವನೆಯನ್ನು ಸಲ್ಲಿಸುತ್ತಿರುವ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಆಯೋಗಕ್ಕೆ ನೇರವಾಗಿ ಸಲ್ಲಿಸಲು ಅಧಿಕಾರವಿದೆಯೇ? ಹಾಗಿದ್ದಲ್ಲಿ ಈ ಸಂಬಂಧ ಅಧಿಸೂಚನೆ/ಆದೇಶದ ಪ್ರತಿ ಲಗತ್ತಿಸಲಾಗಿದೆಯೇ? | | |
| 6 | ನೇಮಕಾತಿಗೆ ಪ್ರಸ್ತಾಪಿಸಿರುವ ಹುದ್ದೆಗಳ ವರ್ಗೀಕರಣಕ್ಕೆ ಸಂಬಂಧಿಸಿದಂತೆ ಪ್ರಾರಂಭಿಕ ಬಿಂದು ಮತ್ತು ಯಾವ ವೃತ್ತದಿಂದ ಪ್ರಾರಂಭಿಸಬೇಕು ಎಂಬ ಬಗ್ಗೆ ಮಾಹಿತಿಯನ್ನು ನೀಡಲಾಗಿದೆಯೇ? | | |
| 7 | ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯಿಂದ ಸಹಮತಿ ಪಡೆದ ಪತ್ರದ ಪ್ರತಿಯನ್ನು ಪ್ರಸ್ತಾವನೆಯೊಂದಿಗೆ ಲಗತ್ತಿಸಲಾಗಿದೆಯೇ? | | |
| 8 | ಪ್ರಸ್ತುತ ಚಾಲ್ತಿಯಲ್ಲಿರುವ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರತಿಯನ್ನು ಪ್ರಸ್ತಾವನೆಯೊಂದಿಗೆ ಲಗತ್ತಿಸಲಾಗಿದೆಯೇ? | | |
| 9 | ಸರ್ಕಾರದ ಇತ್ತೀಚಿನ ಎಲ್ಲಾ ಆದೇಶಗಳನ್ವಯ ಅಂಗವಿಕಲ ಮೀಸಲಾತಿ, 371(ಜೆ) ಮತ್ತು ಇತರೆ ಮೀಸಲಾತಿಗಳಿಗೆ ಹುದ್ದೆಗಳನ್ನು ವರ್ಗೀಕರಿಸಲಾಗಿದೆಯೇ? | | |
| 10 | ನಿಯಮಾನುಸಾರ ಅಂಗವಿಕಲರಿಗೆ ಮೀಸಲಾದ ಹುದ್ದೆಗಳನ್ನು ಯಾವ ಯಾವ ಅಂಗವಿಕಲತೆಗೆ ಮೀಸಲಿಡಬೇಕೆಂದು ಮಾಹಿತಿ ನೀಡಲಾಗಿದೆಯೇ? | | |
| 11 | ಮೀಸಲಿಡಲಾದ ಅಂಗವಿಕಲತೆಯ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಇತರೆ ಯಾವ ಅಂಗವಿಕಲತೆಗಳಿಗೆ ಪರಿಗಣಿಸಬೇಕೆಂದು ಮಾಹಿತಿ ನೀಡಲಾಗಿದೆಯೇ? | | |
| 12 | ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ವಿದ್ಯಾರ್ಹತೆಗೆ ತತ್ಸಮಾನ ವಿದ್ಯಾರ್ಹತೆಗಳನ್ನು ನಿಗದಿಪಡಿಸಿದ್ದಲ್ಲಿ ತತ್ಸಮಾನ ವಿದ್ಯಾರ್ಹತೆಗಳು ಯಾವುವು ಎಂಬುದನ್ನು ಸೂಚಿಸಲಾಗಿದೆಯೇ? | | |
| 13 | ತತ್ಸಮಾನ ವಿದ್ಯಾರ್ಹತೆಗಳನ್ನು ಅಧಿಸೂಚಿಸಿರುವ ಸರ್ಕಾರದ ಅಧಿಸೂಚನೆಯ ಪ್ರತಿಗಳನ್ನು ಲಗತ್ತಿಸಲಾಗಿದೆಯೇ? | | |
| 14 | ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮಗಳನ್ವಯ ಭರ್ತಿ ಮಾಡಬೇಕಿದ್ದಲ್ಲಿ ಆಯೋಗವನ್ನು ಆಯ್ಕೆ ಪ್ರಾಧಿಕಾರವೆಂದು ನಮೂದಿಸಲಾಗಿದೆಯೇ? | | |
| 15 | ಈ ಹುದ್ದೆಗಳ ಆಯ್ಕೆಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಯಾವುದಾದರೂ ಪ್ರಕರಣಗಳು ಬಾಕಿ ಇರುತ್ತವೆಯೇ? ಇದ್ದರೆ, ಯಾವ ಹಂತದಲ್ಲಿವೆ ಎಂಬ ಮಾಹಿತಿಯನ್ನು ನೀಡಲಾಗಿದೆಯೇ? | | |
| 16 | ಆಯ್ಕೆಗೆ ಸಂಬಂಧಿಸಿದಂತೆ ಪ್ರಸ್ತಾವನೆ ಸಲ್ಲಿಸಿದ ನಂತರ ನ್ಯಾಯಾಲಯದಿಂದ ಯಾವುದಾದರೂ ಆದೇಶ ಸ್ವೀಕೃತವಾದಲ್ಲಿ ಅದನ್ನು ಕೂಡಲೇ ಆಯೋಗದ ಗಮನಕ್ಕೆ ತರಲಾಗುವುದೇ? | | |
| 17 | ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ವಿದ್ಯಾರ್ಹತೆಗೆ ಸೇವಾನುಭವ ನಿಗದಿಪಡಿಸಿದ್ದಲ್ಲಿ ಸೇವಾನುಭವದ ವಿವರಗಳನ್ನು ನೀಡಲಾಗಿದೆಯೇ? | | |
| 18 | ಸ್ಪರ್ಧಾತ್ಮಕ ಪರೀಕ್ಷೆಗೆ ಪಠ್ಯಕ್ರಮ ನೀಡಬೇಕಾದಲ್ಲಿ ಅದನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ (Hard copy & Soft Copy) ಲಗತ್ತಿಸಲಾಗಿದೆಯೇ? | | |

| 1 | 2 | 3 | 4 |
|---|---|---|---|
| 19 | ಹೆಚ್ಚುವರಿ ಪಟ್ಟಿಗೆ ಪ್ರಸ್ತಾವನೆ ಸಲ್ಲಿಸುತ್ತಿದ್ದಲ್ಲಿ ಮುಖ್ಯ ಪಟ್ಟಿಯಲ್ಲಿನ ಅಭ್ಯರ್ಥಿಗಳ ನೇಮಕಾತಿ ಬಗ್ಗೆ ವಿವರಗಳನ್ನು ನಮೂನೆ–7 ರಲ್ಲಿ ನೀಡಲಾಗಿದೆಯೇ? | | |
| 20 | ನಮೂನೆ –6ರಲ್ಲಿನ ಪ್ರಸ್ತಾವನೆಯನ್ನು ನೇಮಕಾತಿ ಪ್ರಾಧಿಕಾರ/ಇಲಾಖೆಯ ಮುಖ್ಯಸ್ಥರು ಧೃಡೀಕರಿಸಿರುತ್ತಾರೆಯೇ? | | |

**(ಸಹಿ,ಹೆಸರು ಪದನಾಮ ಮತ್ತು ಮೊಹರು)**
**ಸಂಬಂಧಪಟ್ಟ ಇಲಾಖೆಯ ನೋಡಲ್ ಅಧಿಕಾರಿ**

**ಸ್ವೀಕೃತಿ**

1. ಕ್ರ.ಸಂ................ ರಿಂದ.....................ರ ಮಾಹಿತಿ/ದಾಖಲಾತಿಗಳು ಸ್ವೀಕೃತವಾಗಿದೆ.
2. ಕ್ರ.ಸಂ................ರಿಂದ......................ರ ಮಾಹಿತಿ/ದಾಖಲಾತಿಗಳು ಲಭ್ಯವಿರುವುದಿಲ್ಲ.

**ಹುದ್ದೆಗಳ ಆಯ್ಕೆಗೆ ಪ್ರಸ್ತಾವನೆಯನ್ನು ಪರಿಶೀಲಿಸಿ ಕ್ರಮಬದ್ಧವಾಗಿರುವುದರಿಂದ ಸ್ವೀಕರಿಸಲಾಗಿದೆ.**

**ಅಥವಾ**

**.............................................................................................ಕಾರಣದಿಂದ ತಿರಸ್ಕರಿಸಿ ಇಲಾಖೆಯ ನೋಡಲ್ ಅಧಿಕಾರಿಗೆ ಪ್ರಸ್ತಾವನೆಯನ್ನು ಹಿಂದಿರುಗಿಸಿದೆ.**

**(ಸಹಿ, ಹೆಸರು ಪದನಾಮ ಮತ್ತು ಮೊಹರು)**
**ನೇಮಕಾತಿಗೆ ಸಂಬಂಧಿಸಿದ ಶಾಖೆಯ**
**ಸಹಾಯಕ ಕಾರ್ಯದರ್ಶಿ**
**ಕರ್ನಾಟಕ ಲೋಕಸೇವಾ ಆಯೋಗ**

**(ಸಹಿ,ಹೆಸರು ಪದನಾಮ ಮತ್ತು ಮೊಹರು)**
**ಆಯೋಗದ ನೋಡಲ್ ಅಧಿಕಾರಿ ಮತ್ತು**
**ಉಪ ಕಾರ್ಯದರ್ಶಿ, ಆಡಳಿತ**
**ಕರ್ನಾಟಕ ಲೋಕಸೇವಾ ಆಯೋಗ**

**(ಸಹಿ, ಹೆಸರು ಪದನಾಮ ಮತ್ತು ಮೊಹರು)**
**ಸಂಬಂಧಪಟ್ಟ ಇಲಾಖೆಯ ನೋಡಲ್ ಅಧಿಕಾರಿ**

(ಯಾವುದು ಅಗತ್ಯವಿಲ್ಲವೋ ಅದನ್ನು ಬಿಟ್ಟು ಬಿಡುವುದು)

**ಅನುಬಂಧ–ಡಿ**

**ನಮೂನೆ–7**

ಇಲಾಖೆಯ ನಿಯಂತ್ರಣದಲ್ಲಿರುವ ಕಛೇರಿಯಲ್ಲಿ ನೇಮಕಾತಿ ಮಾಡಿರುವ ವಿವರಗಳ ತಃಖ್ತೆ

| | | |
|---|---|---|
| 1 | ಕಛೇರಿಯ ಹೆಸರು | |
| 2 | ಖಾಲಿ ಹುದ್ದೆಗಳ ಪುಸ್ತಕದಲ್ಲಿ ನೊಂದಾಯಿಸಿದಂತೆ ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಸೂಚಿಸಲಾದ ಹುದ್ದೆಯ ಕ್ರಮ ಸಂಖ್ಯೆ | |
| 3 | ಹುದ್ದೆಯ ಪದನಾಮ, ವೃಂದ ಮತ್ತು ವೇತನ ಶ್ರೇಣಿ | |
| 4 | ಹುದ್ದೆ ಖಾಲಿ ಆಗಿದ್ದ ದಿನಾಂಕ | |
| 5 | ಹುದ್ದೆಯ ಕಾಲಾವದಿ (ತಾತ್ಕಾಲಿಕವಾಗಿದ್ದಲ್ಲಿ ಅಂದಾಜು ಅವಧಿಯನ್ನು ನಮೂದಿಸುವುದು) | |
| 6 | ಲೋಕಸೇವಾ ಆಯೋಗಕ್ಕೆ ಖಾಲಿ ಹುದ್ದೆಯನ್ನು ವರದಿ ಮಾಡಿರುವ ದಿನಾಂಕ | |
| 7 | ಹುದ್ದೆಗಳನ್ನು ಸಾಮಾನ್ಯ/ವಿವಿಧ ಮೀಸಲಾತಿಗಳಿಗೆ ವರ್ಗೀಕರಿಸಲಾಗಿದೆಯೇ, ವರ್ಗೀಕರಿಸಿದ್ದಲ್ಲಿ ಹುದ್ದೆಗಳ ಸಂಖ್ಯೆ. | |
| 8 | ಹುದ್ದೆಯನ್ನು ಅಧಿಸೂಚಿಸದೇ ಅಥವಾ ಮರು ಅಧಿಸೂಚಿಸಿ ಭರ್ತಿ ಮಾಡಲಾಗಿದೆಯೇ? ಆಗಿದ್ದಲ್ಲಿ ಕಾರಣ ನಮೂದಿಸುವುದು. | |
| 9 | ಆಯ್ಕೆಯಾದ ಅಭ್ಯರ್ಥಿಗಳ ಹೆಸರು ಹಾಗೂ ಆಯೋಗದ ಆಯ್ಕೆ ಪಟ್ಟಿಯಲ್ಲಿನ ಅವರ ಕ್ರಮ ಸಂಖ್ಯೆ. | |
| 10 | ನೇಮಕಾತಿ ಆದೇಶದ ಸಂಖ್ಯೆ/ದಿನಾಂಕ ಹಾಗೂ ಅಭ್ಯರ್ಥಿ ವರದಿ ಮಾಡಿದ ದಿನಾಂಕ. | |
| 11 | ಅಭ್ಯರ್ಥಿ ಸೇರಿದ ಮೀಸಲಾತಿ ಅಥವಾ ಪ್ರವರ್ಗ | |
| 12 | ನೇಮಕಾತಿಯನ್ನು ವರದಿ ಮಾಡಿಕೊಳ್ಳುವುದರಲ್ಲಿ/ತಡವಾಗಿ ಮಾಡುವುದಕ್ಕೆ ಕಾರಣ | |
| 13 | ಷರಾಗಳು | |

ನೇಮಕಾತಿ ಪ್ರಾಧಿಕಾರದ ಹೆಸರು,
ಸಹಿ ಮತ್ತು ಮೊಹರು